ಸಮಗ್ರ ಶಿಕ್ಷಣ ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಹೊಸ ಸಾರ್ವಜನಿಕ ಕಚೇರಿಗಳ ಪೂರಕ ಕಟ್ಟಡ,ನೃಪತುಂಗ ರಸ್ತೆ, ಬೆಂಗಳೂರು-1

ಪತ್ರಸಂ:ಸಶಿಕ/13480/ಗುಖಾ/ಪೂ.ಪ್ರಾ/ಆನ್‌ಲೈನ್ ತರಬೇತಿ /2020-21 ದಿನಾಂಕ: 20.08.2020

# ಜ್ಞಾಪನ

ವಿಷಯ: ಕೆ.ಪಿ.ಎಸ್ ಶಾಲೆಯ ಪೂರ್ವ ಪ್ರಾಥಮಿಕ (ಎಲ್.ಕೆ.ಜಿ) ಶಿಕ್ಷಕಿಯರಿಗೆ ಆನ್‌ಲೈನ್ ತರಬೇತಿ ನೀಡುವ ಕುರಿತು.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಶಿಕ/ಗುಖಾ/Pre primary/2020-21, ದಿನಾಂಕ:23.06.2019

********

ಮೇಲ್ಕಂಡ ವಿಷಯ ಮತ್ತು ಉಲ್ಲೇಖದಲ್ಲಿ ತಿಳಿಸಿರುವಂತೆ, 2020-21ನೇ ಸಾಲಿನಲ್ಲಿ 276 ಕೆ.ಪಿ.ಎಸ್ ಶಾಲೆಗಳ ಪೂರ್ವ ಪ್ರಾಥಮಿಕ ತರಗತಿ (ಎಲ್.ಕೆ.ಜಿ ಮತ್ತು ಯು.ಕೆ.ಜಿ) ಶಿಕ್ಷಕಿಯರಿಗೆ ಪಠ್ಯಕ್ರಮ, ತರಗತಿ ನಿರ್ವಹಣೆ, ತರಗತಿ ವೇಳಾಪಟ್ಟಿ, ಯೋಜನಾ ಕಾರ್ಯ, ಬೋಧನಾ ವಿಧಾನಗಳ ಕುರಿತು 5 ದಿನಗಳ ಆನ್‌ಲೈನ್ ತರಬೇತಿಯನ್ನು ವೀಡಿಯೊ ಕಾನ್ಫರೆನ್ಸ್ ಮೂಲಕ ನೀಡಲು ತೀರ್ಮಾನಿಸಲಾಗಿದೆ.

ಅ) ಕೆ.ಪಿ.ಎಸ್.ಗಳ ಪೂರ್ವ ಪ್ರಾಥಮಿಕ ತರಗತಿಗಳಿಗೆ ಹೊಸದಾಗಿ ನೇಮಕಗೊಂಡ ಎಲ್.ಕೆ.ಜಿ (ಶಾಲೆಗೆ ಒಬ್ಬರು ಮಾತ್ರ) ಶಿಕ್ಷಕಿಯರು ಮಾತ್ರ ಕಡ್ಡಾಯವಾಗಿ ಭಾಗವಹಿಸುವಂತೆ ಕ್ರಮವಹಿಸುವುದು. (ಅನುಬಂಧದಲ್ಲಿ ಎಲ್.ಕೆ.ಜಿ ಶಿಕ್ಷಕಿಯರ ಪಟ್ಟಿ ಲಗತ್ತಿಸಲಾಗಿದೆ) ಯು.ಕೆ.ಜಿ ಶಿಕ್ಷಕಿಯರ ತರಬೇತಿ ವಿವರವನ್ನು ನಂತರ ತಿಳಿಸಲಾಗುವುದು.

| ಕ್ರ ಸಂ | ವಿವರ | **ದಿನಾಂಕ** | ತರಬೇತಿ ನಡೆಯುವ ಸ್ಥಳ ಮತ್ತು ಸಮಯ |
|---|---|---|---|
| 1 | ಎಲ್.ಕೆ.ಜಿ ಶಿಕ್ಷಕಿಯರಿಗೆ ಮಾತ್ರ | **25.08.2020 ರಿಂದ 29.08.2020 ವರೆಗೆ** | ಜಿಲ್ಲಾ ಡಯಟ್‌ಗಳು ಪ್ರತಿ ದಿನ ಬೆಳಗ್ಗೆ 10.00 ಗಂಟೆಯಿಂದ, ವೀಡಿಯೊ ಕಾನ್ಫರೆನ್ಸ್ |

ಆ) ಇ.ಸಿ.ಇ ಎಂ.ಆರ್.ಪಿ ತರಬೇತಿ ಪಡೆದ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು ತರಬೇತಿಯಲ್ಲಿ ನಿಗದಿಪಡಿಸಿದ ದಿನಾಂಕದಂದು ಭಾಗವಹಿಸಿ, ತರಬೇತಿಗೆ ಅನುಕೂಲವಾಗುವಂತೆ ಕ್ರಮವಹಿಸುವುದು.(ಅನುಬಂಧದಲ್ಲಿ ಎಂ.ಆರ್.ಪಿಗಳ ಪಟ್ಟಿ ಲಗತ್ತಿಸಿದೆ)

ಇ) ಜಿಲ್ಲಾವಾರು ಎಲ್.ಕೆ.ಜಿ ಮತ್ತು ಯು.ಕೆ.ಜಿ ಶಿಕ್ಷಕಿಯರ ಹಾಗೂ ಇಸಿಇ ಎಂ.ಆರ್.ಪಿ ತರಬೇತಿ ಅನುದಾನ ಡಯಟ್‌ಗಳಿಗೆ ಬಿಡುಗಡೆ ಮಾಡಲಾಗಿದೆ. ಲಗತ್ತಿಸಲಾದ ಅನುಬಂಧದಂತೆ ತರಬೇತಿಗೆ ವೆಚ್ಚವನ್ನು ಭರಿಸುವುದು. ತರಬೇತಿಗೆ ಅಗತ್ಯ ಕಲಿಕೋಪಕರಣಗಳನ್ನು ಪೂರೈಸುವುದು ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಕಿಯರ ವಾಸ್ತವ ಪ್ರಯಾಣ ಭತ್ಯೆ, ಊಟ ಮತ್ತು ವಾಸ್ತವ್ಯದ ವ್ಯವಸ್ಥೆ ಮಾಡುವಂತೆ ಡಯಟ್ ಪ್ರಾಂಶುಪಾಲರು ಕ್ರಮವಹಿಸುವುದು. ಖರ್ಚಾದ ವೆಚ್ಚದ ವಿವರದ ಕುರಿತ ಉಪಯೋಗಿತ ಪ್ರಮಾಣಪತ್ರವನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು.

**ಸೂಚನೆಗಳು**

- ಪೂರ್ವ ಪ್ರಾಥಮಿಕ ತರಗತಿ ಶಿಕ್ಷಕಿಯರು, ಸಂಬಂಧಿಸಿದ ಕೆ.ಪಿ.ಎಸ್ ಪ್ರಾಂಶುಪಾಲರಿಂದ ದೃಢಿಕರಿಸಿದ ಪತ್ರದೊಂದಿಗೆ ಕಡ್ಡಾಯವಾಗಿ ಹಾಜರಾಗುವುದು. ಅನುಬಂಧದಲ್ಲಿರುವ ಜಿಲ್ಲೆಯ ಕೆ.ಪಿ.ಎಸ್‌ಗಳ ಪೂರ್ವ ಪ್ರಾಥಮಿಕ ಎಲ್.ಕೆ.ಜಿ ಶಿಕ್ಷಕಿಯರನ್ನು ಮಾತ್ರ ತರಬೇತಿಗೆ ಕಡ್ಡಾಯವಾಗಿ ನಿಯೋಜಿಸುವುದು. ಆಯಾಗಳನ್ನು ನಿಯೋಜಿಸಬಾರದು. ಕೆ.ಪಿ.ಎಸ್‌ಗಳ ಪೂರ್ವ ಪ್ರಾಥಮಿಕ ಶಿಕ್ಷಕಿಯರ Account Number, IFSC code ಗಾಗಿ ಪಾಸ್ ಪುಸ್ತಕದ ಪ್ರತಿಯನ್ನು ಕಡ್ಡಾಯವಾಗಿ ತರಬೇತಿಗೆ ತರುವುದು. (ಪ್ರಯಾಣ ಭತ್ಯೆಯನ್ನು ನಗದು ರೂಪದಲ್ಲಿ ನೀಡುವುದಿಲ್ಲ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು),
- ತರಬೇತಿಯಲ್ಲಿ ಕೋವಿಡ್-19ರ ಸಾಂಕ್ರಾಮಿಕ ರೋಗ ಹರಡದಂತೆ, ಆರೋಗ್ಯ ನಿಯಮಗಳನ್ನು ಪಾಲಿಸುವುದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ,
ಬೆಂಗಳೂರು

ಅಗತ್ಯ ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಜಿಲ್ಲಾ ಪ್ರಾಂಶುಪಾಲರು ಡಯಟ್ ಹಾಗೂ ಪದನಿಮಿತ್ತ ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ,
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ,
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ,
4. ರಾಜ್ಯದ ಎಲ್ಲಾ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ,
5. ರಾಜ್ಯದ ಎಲ್ಲಾ ಕೆ.ಪಿ.ಎಸ್‌ಗಳ ಪ್ರಾಂಶುಪಾಲರು, ಸಾರ್ವಜನಿಕ ಶಿಕ್ಷಣ ಇಲಾಖೆ, (ಎಲ್.ಕೆ.ಜಿ ಶಿಕ್ಷಕರು ತರಬೇತಿಗೆ ಹಾಜರಾಗುವಂತೆ ಕ್ರಮವಹಿಸುವುದು)

ಮಾಹಿತಿಗಾಗಿ

1) ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.